೧.) '' ಗಂಗಾವಳಿ–ಮುಂಜುಗಣಿ ''ನಡುವೆ ಕಡವು ಸೇತುವೆಯಲ್ಲಿ ತೊಡಗಿಸಲು ಸುಮಾರು ರೂ. ೧೩.೦೦ ಲಕ್ಷ ವೆಚ್ಚದಲ್ಲಿ ಒಂದು ಮಿನಿ ಎಲ್. ಪಿ. ಟಿ. ಹಾಗೂ ಕಡವಿನ ಇಕ್ಕೆಡೆಗಳಲ್ಲಿ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಯೋಜನೆಯನ್ನು ೧೯೮೯–೯೦ನೇ ಆಯವ್ಯಯದಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ. ಈತನ್ಮಧ್ಯೆ ಈ ಯೋಜನೆಯನ್ನು ಕಾರ್ಯಗತಗೊಳಿಸುವರೇ ಕೇಂದ್ರ ಸರ್ಕಾರದ ಆರ್ಥಿಕ ನೆರವನ್ನು ಪಡೆಯುವಂತಾಗಲು ಈ ಯೋಜನೆಯನ್ನು ಕೇಂದ್ರ ಪುರಸ್ಕೃತ ಯೋಜನೆ '' ಯಲ್ಲಿ ಸೇರಿಸಲು ಒಪ್ಪಿಗೆ ನೀಡುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಲು ಉದ್ದೇಶಿಸಿರುತ್ತದೆ.

೨)'' ತದಡಿ–ಅಘನಾಶಿನಿ '' ನಡುವೆ ಕಡವು ಸೇವೆಯಲ್ಲಿ ತೊಡಗಿಸಲು ಸುಮಾರು ರೂ. ೧೧.೯೦ ಲಕ್ಷ ವೆಚ್ಚದಲ್ಲಿ ಒಂದು ಮಿನಿ ಎಲ್. ಪಿ. ಟಿ. ಹಾಗೂ ಕಡವಿನ ಇಕ್ಕೆಡೆಗಳಲ್ಲಿ ಪ್ರಯಾಣಿಕ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ೧೯೮೮–೮೯ನೇ ಆಯವ್ಯಯದಲ್ಲಿ ಸೇರುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದ್ದು ಒಂದು ಪಕ್ಷ ಹೊಸ ಯೋಜನೆಯನ್ನು ೧೯೮೮–೮೯ನೇ ಆಯವ್ಯಯದಲ್ಲಿ ಸೇರಿಸುವ ಅವಕಾಶವಿಲ್ಲದೇ ಇದ್ದಲ್ಲಿ ಇದನ್ನು ೧೯೮೯–೯೦ನೇ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತ ಮಾಡಲು ಉದ್ದೇಶಿಸಿದೆ.

ಶ್ರೀ ಎನ್. ಹೆಚ್. ಗೌಡ.—ಅಧ್ಯಕ್ಷರೇ, ಈ ವಿಷಯವಾಗಿ ನಾನು ಕಳೆದ ೧೯೮೫ನೇ ಇಸವಿಯಿಂದಲೂ ಸರ್ಕಾರಕ್ಕೆ ಒತ್ತಾಯಪಡಿಸುತ್ತಾ ಬಂದಿದ್ದೇನೆ. ನಿಜವಾಗಿಯೂ ಕೂಡ ಜನತೆಗೆ ಕೊಟ್ಟಂಥ ಆಶ್ವಾಸನೆ ಇಲ್ಲಿಯವರೆಗೆ ಈಡೇರದೇ ಇರುವುದರಿಂದ ಜನರು ಬಹಳ ಕುತೂಹಲದಿಂದ ಇದ್ದಾರೆ. ನಮ್ಮಲ್ಲಿ ಗಾಳಿ ಬೀಸುವಾಗ ನದಿ ದಾಟುವುದು ಅಂದರೆ ಸಾಮಾನ್ಯವಾಗಿ ಜನರು ಎಡಗೈನಲ್ಲಿ ಪ್ರಾಣ ಇಟ್ಟುಕೊಂಡು ನದಿ ದಾಟುವ ಪರಿಸ್ಥಿತಿ ಇದೆ. ಗಂಗಾವಳಿ ಮತ್ತು ಅಘನಾಶಿನಿ ನದಿಗಳಲ್ಲಿ ದೋಣಿ ಮೂಲಕ ದಾಟುವಾಗ ಕೆಲವು ಮಕ್ಕಳು ಸಾವಿಗೀಡಾಗಿ ಹೋದ ಸಂದರ್ಭ ಇದೆ. ನಾನು ಸಹ ಅದರ ಅನುಭವ ಪಡೆದಿದ್ದೇನೆ. ನಾನು ತಮ್ಮ ಮುಖಾಂತರ ವಿನಮ್ರವಾಗಿ ಮಾನ್ಯ ಮಂತ್ರಿಗಳಿಗೆ ವಿನಂತಿಸಿಕೊಳ್ಳುವುದೇನೆಂದರೆ, ಈ ಎರಡೂ ನದಿಗಳಿಗೆ ಆದಷ್ಟು ಶೀಘ್ರವಾಗಿ ಎಲ್. ಪಿ. ಟಿ. ಒದಗಿಸುವ ಆಶ್ವಾಸನೆಯನ್ನು ಕೊಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೆಲಸವನ್ನು ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿ ಒಡೆದುಹೋಗಿರುವ ಕೆರೆಗಳ ಬಗ್ಗೆ

೯೩೪. (೨೮೩೫) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳಪೆ ಕಾರ್ಯಗಳಿಂದ ರಾಜ್ಯದಲ್ಲಿ ಇತ್ತೀಚೆಗೆ ಒಡೆದು ಹೋಗಿರುವ ದೊಡ್ಡ ಮತ್ತು ಸಣ್ಣ ಕೆರೆಗಳ ಸಂಖ್ಯೆ ಎಷ್ಟು ?

ಆ) ಹಾನಿಗೊಳಗಾದ ಒಟ್ಟು ಮೊತ್ತ ಎಷ್ಟು ?

ಇ) ಹೈದರಾಬಾದ್, ಕರ್ನಾಟಕ ಜಿಲ್ಲೆಗಳಲ್ಲಿ, ಬೆಂಗಳೂರು, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಮುಂಗಾರು ಮಳೆಯಿಂದಾಗಿ ಕೆರೆಗಳು ಒಡೆಯುವುದನ್ನು ತಡೆಯಲು ಸರ್ಕಾರ ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮುಂಗಾರಿಗೆ ಪೂರ್ವಭಾವಿಯಾಗಿ ಕೆರೆಗಳ ತನಿಖೆ ನಡೆಸಿ ನೂನ್ಯತೆಗಳಿದ್ದಲ್ಲಿ ಸರಿಪಡಿಸಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯಲ್ಲದೇ ಕೆರೆಗೆ ಬರುವ ನೀರಿನ ಬಗ್ಗೆ ಗಮನ ವಿಡಲು ಮತ್ತು ತುರ್ತುಪರಿಸ್ಥಿತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಕಾವಲನ್ನು ಏರ್ಪಡಿಸಲಾಗಿದೆ.

ಪ್ರಶ್ನೆ ೯೩೫ (೨೮೩೭)

ಶ್ರೀ ಹೆಚ್. ಡಿ. ದೇವೇಗೌಡ.—ಬಹುಶಃ ಇದು ಈಗಿನ ಉತ್ತರ ಅಲ್ಲ, ಹಿಂದೆ ತಾವು ಪ್ರಶ್ನೆ ಕೇಳಿದ್ದಕ್ಕೆ ಬಂದಿರುವ ಉತ್ತರ ಎಂದು ಕಾಣುತ್ತದೆ.

ಶ್ರೀ ಕೆ. ಹೆಚ್ ಪಾಟೀಲ್.—ಆಗಲೂ ಅಧಿಕಾರಸ್ಥರು ಸರಿಯಾಗಿ ಉತ್ತರ ಕೊಟ್ಟಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ನಾನು ಇನ್‌ಫರ್‌ಮೇಷನ್ ಓದಿ ಹೇಳಿದ್ದು ಸರಿಯಾದುದು ಅಲ್ಲ. ಸಭೆಯನ್ನು ತಪ್ಪುದಾರಿಗೆ ಎಳೆಯಲಿಕ್ಕೆ ನನಗೆ ಇಷ್ಟವಿಲ್ಲ. ಏಕೆಂದರೆ ನಾನು ಕೆಲವೆಡೆ ಇನ್ಸ್‌ಪೆಕ್ಷನ್ ಮಾಡಿದ್ದೇನೆ, ಸ್ಥಳದಲ್ಲಿಯೇ ನಿರ್ಣಯ ಮಾಡಿದ್ದೇನೆ. ರಿಂಗ್‌ಬಂಡ್ ಹಾಕಿ ಕೆರೆಯಲ್ಲಿ ನೀರನ್ನು ನಿಲ್ಲಿಸಿ, ಬೆಳೆಗೆ ನೀರನ್ನು ಕೊಡಬೇಕೆಂದು ಹೇಳಿದ್ದೇನೆ. ಬಹುತೇಕ ಜಿಲ್ಲಾಪರಿಷತ್ತಿಗೆ ೭೫ ಕೆರೆಗಳು ಬರುತ್ತವೆ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರತಕ್ಕ ಕೆರೆಗಳಲ್ಲಿ ಮೂರು ಕೆರೆಗಳು ಬ್ರೀಚ್ ಆಗಿದೆ, ಬಾಕಿ ಕಡೆ ಸಣ್ಣ ಸಣ್ಣ ಡ್ಯಾಮೇಜ್ ಆಗಿದೆ. ಅಂದರೆ ಎಕ್ಸ್‌ಟ್ರಾ ನೀರನ್ನು, ಹೆಚ್ಚಿಗೆ ಬರತಕ್ಕ ನೀರನ್ನು ನಾವಾಗಿಯೇ ಹೊರಗಡೆ ಬಿಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕ ೭೫ ಕೆರೆಗಳು ಈಗ ಬ್ರೀಚ್ ಆಗಿವೆ. ಈ ರೀತಿ ಡ್ಯಾಮೇಜ್ ಆಗಿರತಕ್ಕ ಕೆರೆಗಳ ಅಂದಾಜು ಸುಮಾರು ೨ ಕೋಟಿ ರೂಪಾಯಿಗಳವರೆಗೂ ಆಗ ಬಹುದೆಂದು ಈಗ ಬಂದಿರತಕ್ಕ ತಾತ್ಕಾಲಿಕ ವರದಿಯ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರತಕ್ಕ ಕೆರೆಗಳು ಏನಿವೆ ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ಜಿಲ್ಲಾಪರಿಷತ್ತಿಗೆ ಸ್ಪೆಷಲ್ ಪ್ರಾವಿಷನ್ ಇಲ್ಲ. ಅಲ್ಲದೆ ಅವರಲ್ಲಿ ಹಣವು ಕೂಡಾ ಇಲ್ಲ. ಆದ್ದರಿಂದ ಈ ಜಿಲ್ಲಾ ಪರಿಷತ್ತುಗಳಿಗೆ ವಿಶೇಷವಾಗಿ ಈ ಬಾಬ್ತಿಗೆ ಹಣವನ್ನು ಕೊಟ್ಟು ರಿಪೇರಿ ಮಾಡಿಸಲು ಆದೇಶವನ್ನು ಕೊಡುತ್ತೀರಾ ? ನಾನು ತಮಗೆ ಉದಾಹರಣೆಗೆ ಹೇಳುವುದಾದರೆ, ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಇಷ್ಟೊಂದು ಹೆಚ್ಚಾಗಿ ಯಾವಾಗಲೂ ಮಳೆಯೇ ಬರುತ್ತಿರಲಿಲ್ಲ. ಆದರೆ ಈ ಸಾರಿ ಅತ್ಯಂತ ಹೆಚ್ಚಾಗಿ ಮಳೆ ಬಂದು ಅನೇಕ ಕಡೆಗಳಲ್ಲಿ ಕೆರೆಗಳು ಒಡೆದು ಹೋಗಿವೆ. ನನ್ನ ತಾಲ್ಲೂಕು ಒಂದರಲ್ಲೇ ೬ ಕೆರೆಗಳು ಒಡೆದು ಹೋಗಿವೆ. ಜಿಲ್ಲಾ ಪರಿಷತ್ತಿನವರನ್ನು ಕೇಳಿದರೆ ನಮ್ಮಲ್ಲಿ ರಿಪೇರಿ ಮಾಡಿಸಲು ಹಣವಿಲ್ಲ, ನಮ್ಮಲ್ಲಿ ಪ್ರಾವಿಷನ್ ಇಲ್ಲ, ಸರ್ಕಾರದಿಂದ ಹಣ ಬಿಡುಗಡೆಯಾಗಿ ಬಂದರೆ ಈ ಕೆರೆಗಳ ಕೆಲಸವನ್ನು ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಬಾಬಿಗೆ ಹಣವನ್ನು ಕೂಡಲೇ ಬಿಡುಗಡೆ ಮಾಡಿ ಆದೇಶ ನೀಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೆರೆಗಳ ರಿಪೇರಿಗಾಗಿ ಜಿಲ್ಲಾ ಪರಿಷತ್ತಿನಿಂದಲೇ ಹಣ ಕೊಡಬೇಕು, ಅಥವಾ ಸರ್ಕಾರದಿಂದಲೇ ಕೊಡಬೇಕೆಂಬುದಕ್ಕೆ ಬದಲಾಗಿ ಪ್ರಕೃತಿ ವಿಕೋಪದಿಂದಾಗಿ ಒಡೆದು ಹೋಗಿರತಕ್ಕ ಇಂಥ ಕೆರೆಗಳ ರಿಪೇರಿ ಕೆಲಸವನ್ನು ಆದ್ಯತೆಯ ಮೇಲೆ ಮಾಡಿಸತಕ್ಕದ್ದು ಜಿಲ್ಲಾ ಪರಿಷತ್ತಿನ ಮತ್ತು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಜಿಲ್ಲಾ ಪರಿಷತ್ತಿನಲ್ಲಿರತಕ್ಕ ಹಣದಲ್ಲಿ ಒಂದು ಬಾಬಿಗೆಂದು ಇಟ್ಟಿರತಕ್ಕ ಹಣವನ್ನು ಮತ್ತೊಂದು ಬಾಬಿಗೆ ಸುಮಾರು ೧೦ ಪರ್ಸೆಂಟ್ ಹಣವನ್ನು ರೀ–ಅಪ್ರೊಪ್ರಿಯೇಟ್ ಮಾಡತಕ್ಕ ಅಧಿಕಾರವನ್ನು ಜಿಲ್ಲಾಪರಿಷತ್ ವಿಧೇಯಕದಲ್ಲಿ ನಾವು ಕೊಟ್ಟಿದ್ದೇವೆ. ಇದರ ಪ್ರಕಾರ ಅವರಲ್ಲಿರತಕ್ಕ ಹಣದಲ್ಲಿ ೧೦ ಪರ್ಸೆಂಟ್‌ನಂತೆ ಹಣವನ್ನು ಈ ಬಾಬಿಗೆ ರೀ–ಅಪ್ರೊಪ್ರಿಯೇಟ್ ಮಾಡಿ ಅದು ಸಾಲದೇ ಬಂದಾಗ ಅವರು ಸರ್ಕಾರಕ್ಕೆ ಬರೆದರೆ ಸರ್ಕಾರಕ್ಕೆ ಎಷ್ಟೇ ಕಷ್ಟವಾದರೂ ಕೂಡ ಹಣವನ್ನು ಬಿಡುಗಡೆ ಮಾಡುತ್ತೇವೆ. ಆದರೆ ಈಗ ಏನು ಕೆರೆಗಳು ಬ್ರೀಚ್ ಆಗಿವೆ ಅವುಗಳ ರಿಪೇರಿ ಕೆಲಸವನ್ನು ಸ್ಥಗಿತಮಾಡುವುದಕ್ಕೆ ನಾವು ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದಕ್ಕಾಗಿ ತಾವು ತಕ್ಷಣ ಹಣವನ್ನು ಬಿಡುಗಡೆ ಮಾಡಿಸಬೇಕು. ಅನೇಕ ಮಂಡಲ ಪಂಚಾಯತ್‌ಗಳಲ್ಲೂ ಕೂಡ ಇಷ್ಟತ್ತು ಹಣದ ಕೊರತೆ ಇದೆ. ನೀವು ನಿಮಗೆ ಕೊಟ್ಟಿರತಕ್ಕ ಹಣದಲ್ಲಿ ೧೦ ಪರ್ಸೆಂಟ್ ಉಳಿತಾಯ ಮಾಡಿ ಎಂದರೆ ಆಗುವುದಿಲ್ಲವೆಂದು ಹೇಳುತ್ತಾರೆ. ನೀವು ಈ ತಕ್ಷಣವೇ ಹಣವನ್ನು ಬಿಡುಗಡೆ ಮಾಡಿ ಬ್ರೀಚ್ ಆಗಿರತಕ್ಕ ಕೆರೆಗಳನ್ನು ದುರಸ್ತಿ ಮಾಡಿಸದಿದ್ದರೆ ಮುಂದೆ ಅವುಗಳಲ್ಲಿ ನೀರು ನಿಲ್ಲುವುದಿಲ್ಲ. ಆದ್ದರಿಂದ ಅಲ್ಲಿ ನೀರನ್ನು ನಿಲ್ಲುವಂತೆ ಮಾಡಬೇಕಾದರೆ ಫ್ಲಡ್ ರಿಲೀಫ್ ಫಂಡ್‌ನಿಂದಲೋ ಅಥವಾ ನಿಮ್ಮ ಡಿಸ್ಕ್ರೆಷನ್ ಫಂಡ್‌ನಿಂದಲೋ ಹಣವನ್ನು ತಕ್ಷಣ ಬಿಡುಗಡೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಈಗಾಗಲೇ ಹೇಳಿದಂತೆ ಜಿಲ್ಲಾ ಪರಿಷತ್ತುಗಳಲ್ಲಿರತಕ್ಕ ಹಣದಲ್ಲಿ ಒಂದೊಂದು ಹೆಡ್‌ನಿಂದ ೧೦–೧೦ ಪರ್ಸೆಂಟ್‌ನಂತೆ ಹಣವನ್ನು ವರ್ಗಾಯಿಸಿಕೊಳ್ಳುವುದಕ್ಕೆ

ಅವಕಾಶ ಮಾಡಿಕೊಟ್ಟಿದ್ದೇವೆ. ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ. ಇದರ ಜೊತೆಗೆ ಕೇಂದ್ರಸರ್ಕಾರಕ್ಕೆ ಇದರ ಬಗ್ಗೆ ಪತ್ರವನ್ನು ಬರೆದು ಕೇಳಿದ್ದೇವೆ. ಅವರಿಂದ ನಾವು ಹಣವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಅದು ಬಂದಕೂಡಲೇ ಆ ಹಣವನ್ನೂ ಕೂಡ ಕೊಡುತ್ತೇವೆ.

ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಗಳ ಬಗ್ಗೆ

೯೩೫ (೩೦೩೪) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಪುದ್ದೊಟ್ಟು ಬೆಳ್ಳಾರೆ ಸೇತುವೆ ಮತ್ತು ಅರಂತೋಡು ಸೇತುವೆ ೧೯೮೬-೮೭ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆಯವ್ಯಯದಲ್ಲಿ ಮಂಜೂರಾಗಿರುವುದು ನಿಜವೇ ? ಸದ್ರಿ ಅರಂತೋಡು ಸೇತುವೆಗೆ ಮಾನ್ಯ ಲೋಕೋಪಯೋಗಿ ಸಚಿವರು ಶಿಲಾನ್ಯಾಸ ಮಾಡಿರುವುದು ನಿಜವೇ ?

ಆ) ಹಾಗಿದ್ದರೂ ಈ ಎರಡು ಸೇತುವೆಗಳನ್ನು ಸರ್ಕಾರ ೩ ವರ್ಷಗಳು ಕಳೆದರೂ ೩ ಸಲ ದರ ಪಟ್ಟಿ ಕರೆದರೂ ಇನ್ನೂ ಪ್ರಾರಂಭಿಸಿಸುವುದಿಲ್ಲ ನಿಜವೇ ? ಈ ಕಾಮಗಾರಿ ಈಗ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬಂದರೂ ಜಿಲ್ಲಾ ಪರಿಷತ್ತಿಗೆ ಸರ್ಕಾರದಿಂದ ತಾಂತ್ರಿಕ ಮಂಜೂರಾತಿ ಹಾಗೂ ಹಣ ಬಿಡುಗಡೆ ಗೊಳಿಸದೆ ಇರಲು ಕಾರಣವೇನು ?

ಇ) ಈ ಎರಡು ಸೇತುವೆಗಳ ನಿರ್ಮಾಣದ ಬಗ್ಗೆ ಸರ್ಕಾರದವರು ಈಗಲಾದರೂ ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಗಳನ್ನು ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಸೇರಿವೆ. ಅರಂತೋಡು ಸೇತುವೆಗೆ ಮಾನ್ಯ ಲೋಕೋಪಯೋಗಿ ಸಚಿವರು ೧೯೮೬ ರ ಡಿಸೆಂಬರ್ ಮಾಸದಲ್ಲಿ ಶಿಲಾನ್ಯಾಸ ಮಾಡಿರುವುದು ನಿಜ.

ಆ) i) ಪುದ್ದೊಟ್ಟು ಬೆಳ್ಳಾರೆ ರಸ್ತೆಯ ಗಾರಿಹೊಳೆಗೆ ಅಡ್ಡಲಾಗಿ ನಿರ್ಮಿಸಬೇಕಾಗಿರುವ ಸೇತುವೆಯ ಕಾಮಗಾರಿಗೆ ಎರಡು ಬಾರಿ ಟೆಂಡರ್ ಕರೆದರೂ ಟೆಂಡರ್ ಹಾಕಲು ಗುತ್ತಿಗೆದಾರರು ಮುಂದೆ ಬರಲಿಲ್ಲ. ೧೯೮೫-೮೬ ಸಾಲಿನಲ್ಲಿ ಪುನಃ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗಧಿಪಡಿಸಿ ಕೆಲಸವನ್ನು ಪ್ರಾರಂಭಿಸಿದಾಗ ತಲೆದೋರಿದ ತಳಪಾಯ ಸಮಸ್ಯೆಗಳಿಂದಾಗಿ ಕೆಲಸವನ್ನು ಮುಂದುವರಿಸಲಾಗಲಿಲ್ಲ. ಈಗ ವಿನ್ಯಾಸವನ್ನು ಬದಲಾಯಿಸಿ ೧೬ ಲಕ್ಷ ರೂಗಳಿಗೆ ಪರಿಷ್ಕೃತ ಅಂದಾಜನ್ನು ತಯಾರಿಸಲಾಗಿದ್ದು, ೧೯೮೮-೮೯ನೇ ಸಾಲಿನಲ್ಲಿ ಜಿಲ್ಲಾಪರಿಷತ್ ಆಯವ್ಯಯದಲ್ಲಿ ಈ ಕಾಮಗಾರಿಗೆ ಒಂದು ಲಕ್ಷ ರೂಗಳ ಅನುದಾನ ನೀಡಲಾಗಿದೆ.

ii) ಅರಂತೋಡು ಸೇತುವೆ ಕೆಲಸದ ಅಂದಾಜಿಗೆ ೧೯೮೬-೮೭ನೇ ಸಾಲಿನಲ್ಲಿ ಮುಖ್ಯ ಇಂಜಿನಿಯರು ಸಂಪರ್ಕ ಮತ್ತು ಕಟ್ಟಡಗಳು ಇವರಿಂದ ೨೦ ಲಕ್ಷ ರೂಗಳಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ಒಂದು ಬಾರಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿ ರದ್ದು ಗೊಳಿಸಲಾಯಿತು. ೧೯೮೭-೮೮ ರ ಸಾಲಿನಲ್ಲಿ ಜಿಲ್ಲಾ ಪರಿಷತ್‌ನವರು ಈ ಕಾಮಗಾರಿಗೆ ಯಾವ ಅನುದಾನವನ್ನು ಸೂಚಿಸಿಲ್ಲ. ೧೯೮೮-೮೯ನೇ ಸಾಲಿನಲ್ಲಿ ಈ ಕಾಮಗಾರಿಗೆ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ೫೫,೦೦೦ ರೂಗಳ ಅನುದಾನವಿರುತ್ತದೆ.

ಇ) ಈ ಎರಡು ಸೇತುವೆಗಳ ನಿರ್ಮಾಣದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನವರು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ನನ್ನ 'ಆ' ಪ್ರಶ್ನೆಗೆ ಉತ್ತರ ನೀಡಿರುವ ಪ್ರಕಾರ ೧೯೮೭-೮೩ರಲ್ಲಿ ಸುಳ್ಯ ಕ್ಷೇತ್ರದ ಪುದ್ದೊಟ್ಟು ಬೆಳ್ಳಾರೆ ಮತ್ತು ಅರಂತೋಡು ಸೇತುವೆಯ ನಿರ್ಮಾಣ